ರುತ್ತದೆ. ನಿಯಮಾನುಸಾರ ಗುತ್ತಿಗೆದಾರರನ್ನು ನಿಗದಿಪಡಿಸಿ ಶೀಘ್ರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಆ) ಪರಿಶೀಲನೆಯಲ್ಲಿದೆ.

ಹಾಸನ ನಗರದಲ್ಲಿ ಮೇಲು ಸೇತುವೆ ನಿರ್ಮಾಣ

1918(2862); ಶ್ರೀ ಕುವಾರಸ್ವಾಮಿ ಎಚ್.ಕೆ. (ಸಕಲೇಶಪುರ)

ಅ) ಹಾಸನ ನಗರದ ಎನ್.ಆರ್.ವೃತ್ತದಿಂದ ಹೊಸ ಬಸ್ ನಿಲ್ದಾಣಕ್ಕೆ ಹೋಗುವ ರಸ್ತೆಗೆ ಮೇಲುಸೇತುವೆ (Fly over) ನಿರ್ಮಾಣದ ಅತಿ ಅವಶ್ಯಕತೆಯಿದ್ದು, ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು?

ಡಾ: ಹೆಚ್.ಸಿ.ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಹಾಸನ ನೂತನ ಬಸ್ ನಿಲ್ದಾಣದ ಹತ್ತಿರ ಹಾದು ಹೋಗಿರುವ ಹಾಸನ–ಮಂಗಳೂರು ರೈಲ್ವೇ ಲೇನಿಗೆ ಅಡ್ಡಲಾಗಿ ಬಾಗಲಕೋಟೆ–ಬಿಳಿಗಿರಿರಂಗನಬೆಟ್ಟ ರಾಜ್ಯ ಹೆದ್ದಾರಿ ಸಂಖ್ಯೆ–57ರ ರಸ್ತೆಯು ಹಾದು ಹೋಗಿದ್ದು ಸದರಿ ಸ್ಥಳದಲ್ಲಿ ಹಾಲಿ ಇರುವ ಲೆವೆಲ್ ಕ್ರಾಸಿಂಗ್ ನಂ–3 ಕಿ.ಮೀ. 1/600–700ಗೆ ಬದಲಾಗಿ ಮೇಲ್ಸೇತುವೆ (ಆರ್.ಓ.ಬಿ) ನಿರ್ಮಿಸುವ ಪ್ರಸ್ತಾವನೆಗೆ ರೈಲ್ವೇ ಇಲಖೆ ಹಾಗೂ ರಾಜ್ಯ ಸರ್ಕಾರವು ಶೇ.50:50ರ ಅನುಪಾತದ ಆರ್ಥಿಕ ಹೊಣೆಯಡಿಯಲ್ಲಿ `34.20 ಕೋಟಿಗಳ ಅಂದಾಜಿನಲ್ಲಿ ನಿರ್ಮಿಸಲು ಒಪ್ಪಿಗೆ ನೀಡಿದೆ. ಸದರ ಮೇಲ್ಸೇತುವೆ (ಆರ್.ಓ.ಬಿ) ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯು ರೈಲ್ವೇ ಇಲಾಖೆಯ ಮುಂದಿದ್ದು, ವಿಸ್ತೃತವಾದ ವಿವರಗಳೊಂದಿಗೆ ನೀಲ ನಕ್ಷೇಗಳನ್ನು (ಜಿ.ಎ.ಡಿ.) ತಯಾರಿಸಲು ಸ್ಥಳದಲ್ಲಿ ಸರ್ವೆ ಕೆಲಸಗಳನ್ನು ರೈಲ್ವೇ ಇಲಾಖೆಯು ಕೈಗೊಂಡಿದೆ.